ಶ್ರೀ ಕಾಗೋಡು ತಿಮ್ಮಪ್ಪ.—ಈ ಯೋಜನೆ ಎಲ್ಲಿಯವರೆಗೆ ಕಾರ್ಯಗತವಾಗಿದೆ ಮತ್ತು ಇದನ್ನು ಪೂರೈಸುವುದಕ್ಕೆ ಎಷ್ಟುಕಾಲ ಹಿಡಿಯುತ್ತದೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಇನ್‌ವೆಸ್ಟಿಗೇಷನ್ ಮುಗಿದು, ಪ್ರಾಜೆಕ್ಟ್ ರಿಪೋರ್ಟ್ ತಯಾರಾಗಿ, ಪ್ರಾಜೆಕ್ಟನ್ನು ಕೇಂದ್ರ ಸರ್ಕಾರಕ್ಕೆ ಕ್ಲಿಯರೆನ್ಸ್ ಬಗ್ಗೆ ಕಳುಹಿಸಿಕೊಟ್ಟಿದ್ದೇವೆ. ಒಂದು ಹಂತಕ್ಕೆ ಬಂದಿದೆ. ಇನ್‌ವೆಸ್ಟಿಗೇಷನ್ ಕೆಲಸ ಪೂರೈಸಿದೆ, A detailed examination of certain aspects of the Project is going on.
ಇದನ್ನು ಐದನೆ ಯೋಜನೆಯಲ್ಲಿ ಪ್ರಾರಂಭ ಮಾಡುವುದಕ್ಕೆ ಯೋಚನೆ ಮಾಡುತ್ತಿದ್ದೇವೆ.

ಶ್ರೀ ಎಸ್. ಎಲ್. ಶೀರನಾಳಿ ಚೆಂದ್ರಶೇಖರ್. ವರಾಹಿ ಯೋಜನೆಯಿಂದ ಎಷ್ಟು ಎಕರೆ ಪ್ರದೇಶ ಮುಳುಗ ಯಾಗುತ್ತದೆ ಎಂದು ಗೊತ್ತಿದೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.— ಎಷ್ಟು ಪ್ರದೇಶ ಮುಳುಗಡೆಯಾಗುತ್ತದೆ ಎನ್ನುವಕ್ಕೆ ಮಾಹಿತಿ ಈಗ ಸದ್ಯದಲ್ಲಿ ನನ್ನ ಹತ್ತಿರ ಇಲ್ಲ.

ಶ್ರೀ ಎ. ಜಿ. ಕೊಡಗಿ—ಮಾನ್ಯ ಮಂತ್ರಿಗಳು ಹೇಳಿರುವುದರಲ್ಲಿ ಈ ಯೋಜನೆ ಇನ್ನೂ ಯಾವ ಹಂತವನ್ನೂ ಮುಟ್ಟಿಲ್ಲ ಎಂದು ಅವರೆ ಒಪ್ಪಿದ ಹಾಗೆ ಆಗಿದೆ. ಇದನ್ನು ಯಾವಾಗ ಕಾರ್ಯಗತ ಗೊಳಿಸುವುದಕ್ಕೆ ಪ್ರಯತ್ನ ಪಡುತ್ತೀರಿ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಯಾವ ಹಂತಕ್ಕೂ ಬಂದಿಲ್ಲ ಎನ್ನುವುದನ್ನು ಸರ್ಕಾರ ಒಪ್ಪಿಲ್ಲ. ಆ ರೀತಿ ಮಾನ್ಯ ಸದಸ್ಯರು ತಿಳಿದುಕೊಡಿರುವುದು ತಪ್ಪು ಎಂದು ಹೇಳಿದೆ.

CENTRAL CLEARANCE FOR PROJECTS IN CAUVERY BASINS

825. Sri S. Bangarappa (Sorab).—Will the Minister of State for Major Irrigation be pleased to state :—

(*a*) whether it has come to the notice of the Government that during the period of Sri Veerendra Patil's Ministry the Central Water and Power Commission did not give technical clearance for several projects in Cauvery basin :

(*b*) if so, whether the present Government has taken any steps to obtain such clearance and more Central assistance to complete the Projects ?

Sri H. N. Nanje Gowda (Minister of State for Major Irrigation).—

(*a*) Yes.

(*b*) Government is pursuing all the cases with Government of India.

ಶ್ರೀ ಎಸ್. ಬಂಗಾರಪ್ಪ.—ಕಾವೇರಿ ಬೇಸಿನ್‌ನಲ್ಲಿ ಒಟ್ಟು ಎಷ್ಟು ಯೋಜನೆಗಳಿವೆ ; ಎಷ್ಟಕ್ಕೆ ತಾಂತ್ರಿಕ ಮಂಜೂರಾತಿ ದೊರಕಿದೆ ; ಎಷ್ಟು ವರ್ಷಗಳಿಂದ ಇನ್ನೂ ಕೆಲವಕ್ಕೆ ಮಂಜೂರಾತಿ ದೊರಕಿಲ್ಲ ?

ಶ್ರೀ ಎಚ್. ಎನ್. ನಂಜೇಗೌಡ.—ಒಟ್ಟು ಎಂಟು ಪ್ರಾಜೆಕ್ಟ್‌ಗಳಿವೆ. ಅದರಲ್ಲಿ ಮಂಚನಬೆಲೆ, ಗುಂಡ್ಲು, ತಾರಕ ಮತ್ತು ಪಾಟದ ಹೊಳೆ ಪ್ರಾಜೆಕ್ಟ್‌ಗಳಿಗೆ ಕ್ಲಿಯರೆನ್ಸ್ ಸಿಕ್ಕಿದೆ. ಕಬಿನಿ ರಿವೈಸ್ಡ್, ಹಾರಂಗಿ, ಹೇಮಾವತಿ ಮತ್ತು ಸುವರ್ಣಾವತಿ ಪ್ರಾಜೆಕ್ಟ್‌ಗಳಿಗೆ ಕ್ಲಿಯರೆನ್ಸ್ ಸಿಕ್ಕಿಲ್ಲ.

ಶ್ರಿ ಎಸ್. ಬಂಗಾರಪ್ಪ.—ಕ್ಲಿಯರೆನ್ಸ್ ಸಿಕ್ಕದೆ ಇರುವ ವಿಷಯದಲ್ಲಿ ಪತ್ರ ವ್ಯವಹಾರ ನಡೆಯುತ್ತಿದೆ ಎಂದು ಹೇಳಿದ್ದಾರೆ. ಎಷ್ಟು ವರ್ಷದಿಂದ ನಡೆಯುತ್ತಿದೆ ?

ಶ್ರೀ ಎಚ್. ಎನ್. ನಂಜೇಗೌಡ.—ಆ ವಿವರಗಳನ್ನು ಡೇಟ್‌ವಾರ್ ಹೇಳಬೇಕಾದರೆ ಬೇರೆ ಪ್ರಶ್ನೆ ಹಾಕಿದರೆ ಹೇಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ತಾಂತ್ರಿಕ ಮಂಜೂರಾತಿಯಂನ್ನು ಸಿ.ಡಬ್ಲ್ಯೂ.ಪಿ.ಸಿ. ಯವರು ಕೊಟ್ಟಿರುವುದರಿಂದ, ಕೇಂದ್ರ ಸರ್ಕಾರದಿಂದ ಎಷ್ಟು ಹಣದ ಸಹಾಯ ನಮ್ಮ ರಾಜ್ಯಕ್ಕೆ ಸಿಕ್ಕಿದೆ ?

ಶ್ರೀ ಎಚ್. ಎನ್. ನಂಜೇಗೌಡ.—ಕ್ಲಿಯರೆನ್ಸ್ ಕೊಡುವುದಕ್ಕೂ, ನಮಗೆ ಹಣಕಾಸಿನ ಸಹಾಯ ಮಾಡುವುದಕ್ಕೂ ಒಂದಕ್ಕೊಂದು ಸಂಬಂಧವಿಲ್ಲ ಎಂದು ಪದೇ ಪದೇ ಈ ಸಭೆಯಲ್ಲಿ ಹೇಳಿದ್ದೇವೆ.

ಶ್ರೀ ಎಚ್. ಎಸ್. ಸಿದ್ದಪ್ಪ —ಈ ಪ್ರಾಜೆಕ್ಟ್‌ನಲ್ಲಿ ಯಗಚಿ ಸೇರಿಸಿ ಆದನ್ನೂ ಪರ್ಸ್ಯೂ ಮಾಡುತ್ತೀರಾ ?

ಶ್ರೀ ಎಚ್. ಎನ್. ನಂಜೇಗೌಡ.—ಯಗಚಿ ಬಗ್ಗೆ ಕ್ಲಿಯರೆನ್ಸ್ ಸದ್ಯದಲ್ಲಿಯೇ ಸಿಕ್ಕುತ್ತದೆ ಎಂದು ನಿರೀಕ್ಷೆ ಮಾಡುತ್ತಿದ್ದೇವೆ.

ಶ್ರೀ ಎಸ್. ಬಂಗಾರಪ್ಪ.—ತಾಂತ್ರಿಕ ಮಂಜೂರಾತಿ ಪಡೆಯತಕ್ಕ ವಿಷಯದಲ್ಲಿ ಪತ್ರ ವ್ಯವಹಾರ ನಡೆಯುತ್ತಿದೆ ಎಂದು ತಿಳಿಸಿದ್ದಾರೆ. ಈಗ ಆ ವ್ಯವಹಾರ ಯಾವ ಹಂತದಲ್ಲಿದೆ ; ಇನ್ನು ಎಷ್ಟು ದಿವಸದಲ್ಲಿ ಮಂಜೂರಾತಿ ಸಿಕ್ಕುತ್ತದೆ ಅಥವಾ ಇಲ್ಲ ಎನ್ನುವ ಫೈನಲ್ ಡಿಸಿಷನನ್ನು ಕೇಂದ್ರ ಸರ್ಕಾರದಿಂದ ಪಡೆಯುವುದಕ್ಕೆ ಸಾಧ್ಯವಾಗುತ್ತದೆ ?

ಶ್ರೀ ಎಚ್. ಎನ್. ನಂಜೇಗೌಡ.—ಬೇಗ ಸಿಕ್ಕಲಿ ಎಂದು ನಿರೀಕ್ಷೆ ಮಾಡುತ್ತೇವೆ. ಯಾವಾಗ ಎನ್ನುವುದನ್ನು ಕೇಂದ್ರ ಸರ್ಕಾರ ಹೇಳಬೇಕಾಗುತ್ತದೆ.

SUPPLY OF ELECTRICITY TO COORG DISTRICT

845. SRI A. M. BELLIAPPA (Mercara).—Will the Minister for Public Works and Electricity be pleased to state :—

(*a*) the number of K. Ws. of power released to Coorg District ; the number of applications pending for supply of electricity ;

(*b*) whether it has come to the notice of Government that power supply fails frequently during peak hours ;

(*c*) if so, the reasons for the same and the number of interruptions in the month of May 1972 at Virajpet, Somwarpet, Mercara and Gonicoppal ;

(*d*) if so, the reasons for not increasing the capacity of the load to District ?

SRI H. M. CHANNABASAPPA (Minister for Public Works and Electricity).—

(*a*) (i) 4690 KVA against the installed capacity of 10,000 KVA.
(ii) 30 as on 30-6-1972.

(*b*) Occasionally.